ಇಂಗ್ಲಿಷ್ ಲಿಟರರಿ ಕ್ಲಬ್‌ಗೆ ಭೇಟಿ ಕೊಡುವ ನೆಪ ಮಾಡಿಕೊಂಡು ಅನಂತಪುರಕ್ಕೂ ಹೋಗಿ ಬಂದರು. ಅಲ್ಲಿದ್ದಾಗಲೇ ಕೆಲವು ವಕೀಲರು, ಲೇಖಕರು ಮತ್ತು ಪತ್ರಕರ್ತರನ್ನು ಭೇಟಿಯಾದರು. ಡೆಕ್ಕನ್ ಎಕ್ಸ್‌ಪ್ರೆಸ್ ವರದಿಗಾರ ವೆಂಕಟನಾರಾಯಣ್ ಜತೆ ಅರ್ಧದಿನ ಚರ್ಚೆ ನೆಪದಲ್ಲಿ ಹಲವು ವಿಷಯ ಕುರಿತು ಮಾತಾಡಿದ ಮೇಲೆ ಪ್ರೊಫೆಸರ್ ಹತಾಶರಾಗಿ ಬಿಟ್ಟರು.

ಪೊಲೀಸರ ಕಣ್ಣಿಗೂ ಬೀಳದೆ ಸಕ್ರಿಯವಾಗಿರುವ ಗುಂಪೊಂದು ರಾಯಲಸೀಮೆಯಲ್ಲಿದೆಯಂತೆ. ಆ ಗುಂಪಿನಲ್ಲಿ ಇರೋರಲ್ಲಿ ಅನೇಕರು ಹೊರ ರಾಜ್ಯದವರು. ನಿಮ್ಮ ಕರ್ನಾಟಕದವರೂ ಆ ಗುಂಪಲ್ಲಿ ಇದ್ದಾರೆ. ಅವರೆಲ್ಲ ವೈಟ್‌ಕಾಲರ್ ಆಕ್ಟಿವಿಸ್ಟ್‌ಗಳೇ. ಬರೀ ಮಾತು, ಚರ್ಚೆ. ಎಲ್ಲರೂ ಇಂಗ್ಲಿಷ್ ಮಾತಾಡ್ತಾರಂತೆ. ಕೆಲವರು ಹಣಕ್ಕಾಗಿ ರಿಯಲ್ ಎಸ್ಟೇಟ್‌ನಲ್ಲಿ ಏಜೆಂಟರಂತೆ ಕೆಲಸ ಮಾಡ್ತಿದ್ದಾರೆ ಅಂತ ಗೊತ್ತಾಗಿದೆ.

ಬಳ್ಳಾರಿ ಹೊಸಪೇಟೆ ನಡುವೆ ದೊಡ್ಡದೊಂದು ಟೌನ್‌ಶಿಪ್ ಆಗ್ತಾ ಇದೆ. ನಿಮಗೂ ಗೊತ್ತಿರಬೇಕು. ಅದನ್ನು ಕೃಷ್ಣದೇವರಾಯ ಮೆಗಾ ಸಿಟಿ ಹೆಸರಿನಲ್ಲಿ ಡೆವೆಲಪ್ ಮಾಡೊ ಪ್ರಯತ್ನ ನಡೀತಿದೆ. ಆ ಪ್ರಾಜೆಕ್ಟ್‌ನಲ್ಲಿ ಐದು ಸಾವಿರ ಜನ ಕೆಲಸ ಮಾಡ್ತಾ ಇದಾರೆ. ನಿಮಗೇ ಗೊತ್ತಲ್ಲ, ಈಗ ಅಲ್ಲಿ ಮೈನಿಂಗ್ ಮೊದಲಿನಂತೆ ನಡೀತಿಲ್ಲ. ಚುನಾವಣೆಗಳಲ್ಲಿ ಮೊದಲಿನ ಖದರಿಲ್ಲ. ಎಲ್ಲವೂ ಸಪ್ಪೆ. ಕೊಲೆ, ಸುಲಿಗೆಗಳೂ ಕಡಿಮೆಯಾಗಿವೆ. ಮೊದಲಿನಷ್ಟು ದುಡ್ಡು ಓಡಾಡ್ತಾ ಇಲ್ಲ. ರಾಜಕೀಯ ವೈಷಮ್ಯಗಳು ಕಡಿಮೆಯಾಗಿವೆ. ಏಳೆಂಟು ಸಾವಿರ ಗಣಿ ಕಾರ್ಮಿಕರು ಕೆಲಸ ಇಲ್ಲದೆ ಕೂತಿದ್ದಾರೆ. ಈಗ ಅವರೆಲ್ಲ ಪೊಲಿಟಿಕಲ್ ಪಾರ್ಟಿಗಳ ಪರವಾಗಿ ಸಾಮಾನ್ಯ ಕಾರ್ಯಕರ್ತರಂತೆ ಕೆಲಸ ಮಾಡ್ತಾ ಇದ್ದಾರಂತೆ. ಕೆಲವರು ಅವರನ್ನು ಬಳಸಿಕೊಂಡು ಸರ್ಕಾರಿ ಅಧಿಕಾರಿಗಳನ್ನ, ರಾಜಕೀಯ ವಿರೋಧಿಗಳನ್ನ ಹೆದರಿಸೋದು ಸೇರಿದಂತೆ ಸಣ್ಣಪುಟ್ಟ ಕ್ರೈಂಗಳನ್ನೂ ಮಾಡಿಸ್ತಾ ಇದ್ದಾರೆ ಅಂತ ಗೊತ್ತಾಗಿದೆ. ಚುನಾವಣೆಗಳು ನಡೆಯುವ ರಾಜ್ಯಗಳಿಗೆ ಇವರನ್ನೇ ಕಳಿಸಿ ತಮಗೆ ಬೇಕಾದ ಪಕ್ಷಗಳ ಪರವಾಗಿ ಪ್ರಚಾರ ಮಾಡೋಕೆ, ದಾದಾಗಿರಿಗೆ ಬಳಸಿಕೊಳ್ಳೋ ಹೊಸ ವರಸೆ ಶುರುವಾಗಿದೆ. ಸಿನಿಮಾಗಳ ಶೂಟಿಂಗ್‌ಗಾಗಿ ಎಕ್ಸ್‌ಟ್ರಾ ಕಲಾವಿದರನ್ನು ಸಪ್ಲೈ ಮಾಡ್ತಾರಲ್ಲ ಹಾಗೆ. ಪೊಲೀಸರಿಗೆ ಅನುಮಾನವೇ ಬರ್ತಾ ಇಲ್ಲವಂತೆ ಅಂತ ವೆಂಕಟನಾರಾಯಣ ಹೇಳಿದ್ದನ್ನು ಕೇಳಿ ಪ್ರೊಫೆಸರ್‌ಗೆ ಅವನು ತಮಾಷೆ ಮಾಡ್ತಾ ಇದ್ದಾನೆ ಅನ್ನಿಸಿತು.

ತೆಲುಗು ಸಿನಿಮಾಗಳನ್ನು ನೋಡಿ ನೋಡಿ ಏನೇನೋ ಕಲ್ಪಿಸಿಕೊಂಡು ಅದನ್ನೇ ಸತ್ಯವೆಂದು ನಂಬಿದ್ದಾನೆ. ಎಲ್ಲವೂ ತನ್ನ ಕಣ್ಣೆದುರೇ ನಡೆಯಿತು ಅನ್ನೋ ಹಾಗೆ ಹೇಳುವ ಕಲೆಗಾರಿಕೆ, ಹೇಳುವಾಗಿನ ಧ್ವನಿಯ ಏರಿಳಿತಗಳು ಅವನಿಗೆ ಕರಗತವಾಗಿವೆ. ಅವನ ಮಾತನ್ನು ಯಾರೇ ಕೇಳಿಸಿಕೊಂಡರೂ ಅವನು ಹೇಳುವುದು ನಿಜವೊ, ಸುಳ್ಳೊ ಎನ್ನುವ ನಿರ್ಧಾರಕ್ಕೆ ಬರಲಾಗದೆ ಗೊಂದಲಕ್ಕೆ ಬೀಳ್ತಾರೆ ಅನ್ನಿಸಿತು. ಇನ್ನು, ಅವನು ಬರೆಯುವ ವರದಿಗಳನ್ನು ಓದುವ ಜನರ ಮನಃಸ್ಥಿತಿ ಏನಾಗಬಹುದು ಎಂದು ಯೋಚಿಸಿ ಪ್ರೊಫೆಸರ್ ಆತಂಕಗೊಂಡರು.

ಆತಂಕದಲ್ಲೇ ಮೈಸೂರಿಗೆ ಹಿಂದಿರುಗಿದರು. ಅಲ್ಲಿಂದ ಬಂದ ಮೂರನೇ ದಿನ ಬೆಳ್ಳಂಬೆಳಗ್ಗೆ ವೆಂಕಟನಾರಾಯಣನಿಂದ ಫೋನ್ ಬಂತು.

'ಗುರುವುಗಾರು, ಮೀಕಿ ಒಕ ಬ್ಯಾಡ್ ನ್ಯೂಸ್... ನಾಕೂ ಇಪ್ಪುಡೇ ತೆಲಿಸಿಂದಿ' ಎನ್ನುತ್ತ ತೆಲುಗಿನಲ್ಲಿ ಮಾತು ಶುರು ಮಾಡಿದ. ಆದರೆ ಅವನ ಧ್ವನಿಯಲ್ಲಿನ ಆತಂಕವನ್ನು ಗುರುತಿಸಿದರು. ಅವನು ಹೇಳುತ್ತಲೇ ಹೋದ.

ಎರಡು ದಿನಗಳ ಹಿಂದೆ ಬಳ್ಳಾರಿ ಗುಂತಕಲ್ ನಡುವೆ ಇರೋ ಹದ್ದಿನಗುಂಡು ರೈಲ್ವೆ ಸ್ಟೇಷನ್ ಹತ್ತಿರ ಒಂದು ಎನ್‌ಕೌಂಟರ್ ಆಗಿದೆ. ಅದರಲ್ಲಿ ಬೊಬ್ಬಿಲಿಯವನ ಗುಂಪಿಗೆ ಸೇರಿದ ಮೂವರು